ಶ್ರೀ ಪಿ. ಎಂ. ನಾಡಗೌಡ.—ಇದು ಬರಾಬರಿಯಲ್ಲ.

ಶ್ರೀ ಎಂ. ನಾಗಪ್ಪ.—ಇಲ್ಲಿ ಇಬ್ಬರು ಮಹನೀಯರು ಎಲೆಕ್ಷನ್ ಪೇಪರುಗಳನ್ನು ಕಿತ್ತು ಕೊಂಡು ಹೋದರು ಎಂದು ಹೇಳಿದಿರಿ. ಸಾಮಾನ್ಯವಾಗಿ ಚುನಾವಣೆಗಳು ನಡೆಯುವಾಗ ಅಲ್ಲಿ ಸರಕಾರದ ಅಧಿಕಾರಿಗಳೇ ಇರುತ್ತಾರೆ, ಜೊತೆಗೆ ಪೋಲೀಸಿನವರೂ ಇರುತ್ತಾರೆ.

ಶ್ರೀ ಜಿ. ದುಗ್ಗಪ್ಪ.—ಆನ್ ಎಂಪ್ಲಾಯಿಂಟ್ ಆಫ್ ಆರ್ಡರ್ ಸಾರ್, ಮಾನ್ಯ ಮಂತ್ರಿಗಳು ಇಲ್ಲಿ ಮುನಿಯಪ್ಪ ಮತ್ತು ರಷೀದು ಎನ್ನುವ ಇಬ್ಬರು ಇಲ್ಲಿನ ಕಾಗದಪತ್ರಗಳನ್ನು ಕಿತ್ತುಕೊಂಡು ಹೋದರು ಎಂದು ಹೇಳುತ್ತಾರೆ. ಅವರೆ ಇನ್ನೊಬ್ಬ ಮಂತ್ರಿಗಳು ದೂರೇ ಬಂದಿಲ್ಲ ಎಂದು ಹೇಳು ತ್ತಾರೆ. ಇದರಲ್ಲಿ ಯಾವುದು ಸರಿ ?

ಉಪಾಧ್ಯಕ್ಷರು.—ಇದು ಪಾಯಿಂಟ್ ಆಫ್ ಆರ್ಡರಾಗುವುದಿಲ್ಲ.

ಶ್ರೀ ಎಂ. ನಾಗಪ್ಪ.—ಇಲ್ಲಿ ಇಬ್ಬರು ಮಹನೀಯರು ಕಾಗದಪತ್ರಗಳನ್ನು ಕಸಿದುಕೊಂಡು ಹೋದರು ಎಂದು ಹೇಳುತ್ತೀರಿ. ಸಾಮಾನ್ಯವಾಗಿ ಎಲೆಕ್ಷನ್‌ಗಳು ನಡೆಯುವಾಗ ಅಲ್ಲಿ ಸರಕಾರಿ ಅಧಿಕಾರಿಗಳು ಇರುತ್ತಾರೆ ಮತ್ತು ಪೋಲೀಸಿನವರೂ ಇರುತ್ತಾರೆ. ಇವರಿಬ್ಬರೂ ಇರುವಾಗ ಅದು ಹೇಗೆ ಕಾಗದಪತ್ರಗಳನ್ನು ಕಿತ್ತುಕೊಂಡು ಹೋದರು ? ಇಲ್ಲಿ ಅಡ್ಮಿನಿಸ್ಟ್ರೇಷನ್ ಎನ್ನುವುದು ಇದೆಯೇ? ಇಲ್ಲವಿದ್ದರೆ ಆಡಳಿತ ಪಕ್ಷದವರ ಮತಿಯಿಂದ ಇಲ್ಲಿ ನಡೆಯುವ ಚುನಾವಣೆಗಳನ್ನು ಮುಂದೂಡ ಬೇಕೆಂದು ಹೀಗೇನಾದರೂ ಮಾಡಿದಿರಾ ?

ಶ್ರೀ ಪಿ. ಎಂ. ನಾಡಗೌಡ.—ಹಾಗೆ ಮುಂದೂಡುವ ಪ್ರಶ್ನೆಯೇ ಇಲ್ಲ.

ಶ್ರೀ ಹೆಚ್. ಶಿದ್ದವೀರಪ್ಪ.—ಮಾನ್ಯ ಮಂತ್ರಿಗಳು ಹೇಳಿದಂತೆ ಇಲ್ಲಿ ಬರಾಬರಿಯಾಗಿ ರಿಪೋರ್ಟು ಬರುವುದಕ್ಕೆ ಇನ್ನೆಷ್ಟು ದಿವಸಗಳು ಬೇಕಾಗುತ್ತದೆ ?

ಶ್ರೀ ಪಿ. ಎಂ. ನಾಡಗೌಡ.—ರಿಪೋರ್ಟು ಬಂದಾಗಲೇ ಹೇಳಬಹುದು. ಈಗ ಇದನ್ನು ಹೇಳಲಿಕ್ಕೆ ಬರುವುದಿಲ್ಲ.

ಉಪಾಧ್ಯಕ್ಷರು.—ಅಲ್ಪಕಾಲವಧಿ ಪ್ರಶ್ನೆಗಳು ಮುಗಿದವು.

QUESTIONS FOR ANSWERS ON THE DAY

(but not taken up)

Bridges on Sagar-Kogar-Tumri Road

499. **Sri K. H. SRINIVASA** (Sagar).—

Will the Minister for Public Works be pleased to state :—

(*a*) whether two estimates, one proposing the reconstuction and another proposing the repair of the collapsed bridges on the Sagar-Kogar-Tumri Road, are pending with the Chief Engineer;

(*b*) whether the Government has taken final decision in the matter ;

(*c*) when the construction of the bridges is going to be taken up ;

A.—**Sri VEERENDRA PATIL** (Minister for Public Works).—

(*a*) No ; the estimate for the reconstruction of the bridges is under consideration of the Chief Engineer.

(*b*) Yes.

(*c*) As early as possible.